(ಈ ಹಂತದಲ್ಲಿ ಮಾನ್ಯ ಜೆ.ಸಿ.ಮಾಧುಸ್ವಾಮಿಯವರು, ಮಾನ್ಯ ವಾಟಾಳ್ ನಾಗರಾಜ್‌ರವರು, ಮಾನ್ಯ ಜಿ.ವಿ.ಶ್ರೀರಾಮರೆಡ್ಡಿಯವರು, ಮಾನ್ಯ ಎಸ್.ರಾಜೇಂದ್ರನ್‌ರವರು, ಮತ್ತು ಮಾನ್ಯ ಜಯಪ್ರಕಾಶ ಹೆಗ್ಡೆಯವರು ಸಭಾತ್ಯಾಗ ಮಾಡಿದರು.)

ಅಧ್ಯಕ್ಷರು: ಶೂನ್ಯ ವೇಳೆಯಲ್ಲಿ ಮತ್ತೆ ಮತ್ತೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿಲ್ಲ. ನೀವು ಚರ್ಚೆ ಮಾಡಿದ ಹಾಗೆ ಮಾಡುತ್ತಿದ್ದೀರಿ ದಯಮಾಡಿ ಕುಳಿತುಕೊಳ್ಳಿ. ಮಧ್ಯಾಹ್ನ ಅವರು statement ಮಾಡಿಸುತ್ತೇನೆಂದು ಹೇಳಿದ್ದಾರೆ. ದಯಮಾಡಿ ಕುಳಿತುಕೊಳ್ಳಿ.

(9) ವಿಷಯ: ಸಂಪೂರ್ಣ ಸಾರಾಯಿ ನಿಷೇಧ ಕುರಿತು.

ಶ್ರೀ ಸಿ.ಟಿ.ರವಿ (ಚಿಕ್ಕಮಗಳೂರು): ಮಾನ್ಯ ಅಧ್ಯಕ್ಷರೆ, ಜುಲೈ ಒಂದನೇ ತಾರೀಖಿನಿಂದ ಜಾರಿಗೆ ಬರುವಂತೆ ರಾಜ್ಯದಲ್ಲಿ ಸಂಪೂರ್ಣವಾಗಿ ಸಾರಾಯಿ ನಿಷೇಧ ಮಾಡಿರತಕ್ಕಂತಹ ಕ್ರಮವನ್ನು ನಾವೆಲ್ಲಾ ಸ್ವಾಗತಿಸಿದ್ದೇವೆ. ಆದರೆ ಅದು ಅನುಷ್ಠಾನಕ್ಕೆ ಬಂದಿದೆಯಾ? ನಿನ್ನೆ ನಾನು ನನ್ನ ಕ್ಷೇತ್ರದ ತಾಂಡೆ ಹೋಬಳಿಗೆ ಹೋಗಿದ್ದೆ. ಸಾರಾಯಿ ಪ್ಯಾಕೇಟ್‌ಗಳು ಊರುಗಳಲ್ಲಿ ಮೊದಲು ಬರೀ ವೆಂಡರ್ ಶಾಪ್‌ನಲ್ಲಿ ಸಿಗುತ್ತಿದ್ದವು. ಈಗ ಊರು ಊರಿನಲ್ಲಿ ಸಿಗುತ್ತಿವೆ.

(ಸಾರಾಯಿ ಪ್ಯಾಕೇಟುಗಳನ್ನು ಪ್ರದರ್ಶನ ಮಾಡಿದರು)

ಅಧ್ಯಕ್ಷರು: ಸಾರಾಯಿನಾ ಅದು? ಸಾರಾಯಿನ ಇಲ್ಲಿಗೇಕೆ ತೆಗೆದುಕೊಂಡು ಬಂದಿರಿ? ಅದನ್ನು ನನಗೆ ಕಳುಹಿಸಿ ಕೊಡಿ. ಅದನ್ನು test ಮಾಡಿಸಿ ಅಸಲಿಯೋ ನಕಲಿಯೋ ಎಂದು ನೋಡುತ್ತೇನೆ. ನನ್ನ ಛೇಂಬರ್‌ನಲ್ಲಿ ಕೊಡಿ. ಅವರು ಏನೋ ಪ್ರಸ್ತಾಪ ಮಾಡುತ್ತಿದ್ದಾರೆ ಕೇಳಿ. ಅವರಿಗೆ ಪ್ರಸ್ತಾಪ ಮಾಡುವುದಿಕ್ಕೇ ಬಿಡುತ್ತಿಲ್ಲ.

(ಗೊಂದಲ)

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ಸಾರಾಯಿ ಪ್ಯಾಕೆಟ್‌ಗಳು ಮೊದಲು ವೆಂಡರ್ ಶಾಪ್‌ಗಳಲ್ಲಿ ಮಾತ್ರ ಸಿಗುತ್ತಿದ್ದವು. ಈಗ ಗೂಡು ಅಂಗಡಿಯಲ್ಲಿಯೂ ಸಿಗುತ್ತವೆ, ಶಾಲೆ ಬಿಟ್ಟಾಗ ಮಕ್ಕಳು ತಮ್ಮ ಜೇಬುಗಳಲ್ಲಿ

ಇಟ್ಟುಕೊಂಡು ಹೊರಗಡೆ 15 ರೂಪಾಯಿಗೆ ಮಾರಾಟ ಮಾಡುತ್ತಿದ್ದಾರೆ. ಇದರ ಹಿಂದೆ ಒಂದು ದೊಡ್ಡ ಮಾಫಿಯಾ ಇದೆ. ನಾನು ಈ ಬಗ್ಗೆ ಅಧಿಕಾರಿಗಳಿಗೆ ಕೇಳಿದರೆ, ಎಲ್ಲಾ ಕಂಟ್ರೋಲ್‌ನಲ್ಲಿದೆ ಎಂದು ಹೇಳಿದರು. ಆ ಮೇಲೆ ನಾನು ಕರೆದುಕೊಂಡು ಹೋಗಿ ತೋರಿಸಿದೆ, ಅವರು ಹೇಳುತ್ತಾರೆ, ನಮಗೆ ಇಲ್ಲಿ ಪಕ್ಕದ ಜಿಲ್ಲೆಯಾದ ಹಾಸನ ಜಿಲ್ಲೆಯಿಂದ ಬರುತ್ತದೆ ಎಂದು ಹೇಳುತ್ತಾರೆ. ಈ ಕಡೆ ಬೆಳಗಾಂನಲ್ಲಿ ಗೋಕಾಕ್ ಕಡೆಯಿಂದ, ರಾಯಚೂರಿನಲ್ಲಿ ಇದು ಒಂದು ದೊಡ್ಡ ಮಾಫಿಯಾ ಆಗಿದೆ. ಇಲ್ಲಿ ಇದನ್ನು ನಿಯಂತ್ರಣಕ್ಕೆ ತರದೇ ಇದ್ದರೆ, ಈ ಮಾಫಿಯಾ ಇಡೀ ರಾಜ್ಯವನ್ನು ತನ್ನ ಕಂಟ್ರೋಲ್‌ಗೆ ತೆಗೆದುಕೊಳ್ಳುತ್ತದೆ. ಇದರಿಂದ ಸರ್ಕಾರಕ್ಕೆ 1.900 ಕೋಟಿ ರೂಪಾಯಿಗಳ ಪಂಗನಾಮವೂ ಆಯಿತು, ಈ ಮಾಫಿಯಾ ಕೈಯಲ್ಲಿ ಹಣ ಆಯಿತು. ನಾಳೆ ಇದು ಸಂಪೂರ್ಣ ತನ್ನ ಕಂಟ್ರೋಲ್‌ಗೆ ತೆಗೆದುಕೊಳ್ಳುತ್ತದೆ, ಇದರಿಂದ ದೊಡ್ಡ ಅನಾಹುತವಾಗುತ್ತದೆ. ಇದನ್ನು ನಿಯಂತ್ರಣ ಮಾಡುವುದಕ್ಕೆ ಉಗ್ರ ಕ್ರಮ ತೆಗೆದುಕೊಳ್ಳಬೇಕು. ಇದರ ಹಿಂದೆ ಅಧಿಕಾರಿಗಳೂ ಶಾಮೀಲಾಗಿದ್ದಾರೆ. ದೊಡ್ಡ ದೊಡ್ಡ ಪ್ರಮುಖ ಹುದ್ದೆಗಳಲ್ಲಿರತಕ್ಕಂತಹ ರಾಜಕೀಯ ವ್ಯಕ್ತಿಗಳು ಸಹ ಇದರಲ್ಲಿ ಶಾಮೀಲಾಗಿದ್ದಾರೆ.

ಅಧ್ಯಕ್ಷರು: ಬೇಕಾದರೆ ಇನ್ನೊಂದು ಸಾರಿ ಚರ್ಚೆಗೆ ಅವಕಾಶ ಕೊಡುತ್ತೇನೆ, ಬೇರೆ ಸಮಯದಲ್ಲಿ ನೋಟಿಸ್ ಕೊಡಿ. ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ. ಇದು ಶೂನ್ಯ ವೇಳೆ. ದಯಮಾಡಿ ಸಹಕರಿಸಿ.

(ಗೊಂದಲ)

ಶ್ರೀ ಎನ್.ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಪ್ರಸ್ತುತ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ, ತಾವು ಕಳುಹಿಸಿ ಕೊಡಬೇಕು, ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡಬೇಕು. ಮಾನ್ಯ ರವಿಯವರು ಹೇಳಿದಂತಹ ಪ್ರಶ್ನೆ ಏನಿದೆ, ಕೇವಲ ಅವರಿಗೆ ಸಂಬಂಧಪಟ್ಟಿದ್ದು ಅಲ್ಲ. ಇವತ್ತು ಸಾರಾಯಿ ನಿಷೇಧ ಮಾಡಿದ್ದೇವೆ, ಇಷ್ಟು ಹಣ ಬಿಡುಗಡೆ ಮಾಡುತ್ತಿದ್ದೇವೆ, ಎನ್ನತಕ್ಕಂತಹ ಶಹಬಾಸ್‌ಗಿರಿಯನ್ನು ಪಡೆಯತಕ್ಕಂತಹ ಮಾನ್ಯ ಯಡಿಯೂರಪ್ಪನವರು ಬಂದು ಹೇಳಬೇಕು. ಎಲ್ಲಾ ಕಡೆಯಲ್ಲಿಯೂ ಪ್ಯಾಕೇಟ್ ಸಿಗುತ್ತಿದೆ. ಮೊನ್ನೆ ಕೂಡ ನಾವು ಹೇಳಿದ್ದೇವೆ. ಇವೊತ್ತಿನ ದಿವಸ

ಬಹಳ ಗಂಭೀರವಾದ ಸಮಸ್ಯೆ ಉಂಟಾಗಿದೆ. ರಾಯಚೂರು ಜಿಲ್ಲೆ ಮಾತ್ರವಲ್ಲದೇ ಬೇರೆ ಕಡೆಯಲ್ಲಿಯೂ ಇದೆ. ಈ ಸಾರಾಯಿ ನಿಷೇಧ ಮಾಡಿದ ಮೇಲೆ ಈ ಮಾಫಿಯಾ ಏನಿವತ್ತು ಇಡೀ ರಾಜ್ಯದಲ್ಲಿ ಇದೆ, ಇದನ್ನು ಕಂಟ್ರೋಲ್‌ಗೆ ತೆಗೆದುಕೊಳ್ಳತಕ್ಕಂಥದ್ದರ ಬಗ್ಗೆ ಸ್ಪಷ್ಟವಾದ ಉತ್ತರ ಕೊಡಬೇಕು ಮತ್ತು ನಿಯಂತ್ರಣಕ್ಕೆ ತೆಗೆದುಕೊಳ್ಳಬೇಕು.

ಅಧ್ಯಕ್ಷರು:– ಉತ್ತರ ಕೊಡುತ್ತಾರೆ, ಕೊಡುತ್ತಾರೆ.

ಶ್ರೀ ಎನ್.ಧರ್ಮಸಿಂಗ್:– ಕೇವಲ ಕೊಡುತ್ತಾರೆ ಎಂದರೆ ಹೇಗೆ? ಯಡಿಯೂರಪ್ಪನವರು ಬರಬೇಕು.

ಅಧ್ಯಕ್ಷರು:– ಹೇಳಿದೆನಲ್ಲಾ. ಉತ್ತರ ಕೊಡಿಸುತ್ತೇನೆಂದು. ಈಗ ಇದು ಬಹಳ ಗಂಭೀರವಾದ ವಿಚಾರವಾಗಿದೆ. ಎಲ್ಲಾ ಕಡೆಗಳಲ್ಲಿಯೂ ಇದು ನಡೆಯುತ್ತಿದೆಯೆಂದು ಪತ್ರಿಕೆಗಳಲ್ಲಿಯೂ ಬಂದಿದೆ. ನನಗೂ ಗೊತ್ತಾಗಿದೆ. ನಿಮ್ಮೆಲ್ಲರಿಗೂ ಗೊತ್ತಾಗಿದೆ. ಆದುದರಿಂದ ಸರ್ಕಾರ ಏನು ಕಠಿಣ ಕ್ರಮವನ್ನು ತೆಗೆದುಕೊಳ್ಳುತ್ತದೆ ನೋಡೋಣ. ಮಧ್ಯಾಹ್ನ ಈ ಬಗ್ಗೆ ಸ್ಟೇಟ್‌ಮೆಂಟ್ ಮಾಡಿ ಎಂದು ನಾನು ಅವರಿಗೆ ಹೇಳುತ್ತೇನೆ. ಸದ್ಯಕ್ಕೆ ಸರ್ಕಾರದ ಪರವಾಗಿ ಈಗ ಮಾನ್ಯ ಹೊರಟ್ಟಿಯವರು ಹೇಳುತ್ತಾರೆ.

ಶ್ರೀ ಬಿ.ಎಸ್.ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):– ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ರವಿಯವರು ಮತ್ತು ಇತರ ಸದಸ್ಯರು ಸರ್ಕಾರದ ಗಮನಕ್ಕೆ ಈ ವಿಷಯವನ್ನು ಈಗ ತಂದಿದ್ದಾರೆ.

ಅಧ್ಯಕ್ಷರು:– ಸರ್ಕಾರದ ಗಮನಕ್ಕೆ ಬಂದಿದೆಯೋ, ಬಂದಿಲ್ಲವೋ?

ಶ್ರೀ ಬಿ.ಎಸ್.ಹೊರಟ್ಟಿ:– ಈಗ ಗಮನಕ್ಕೆ ತಂದಿದ್ದಾರೆ ಮತ್ತು ಅನೇಕ ಕಡೆಗಳಿಂದ ಬಂದಿದೆ. ನಾನು ಹೇಳುತ್ತೇನೆ. ಇದರಲ್ಲೇನೂ ಮುಚ್ಚಿಟ್ಟುಕೊಳ್ಳುವುದಕ್ಕಾಗುವುದಿಲ್ಲ. ಇದು ನಡೆದಿದೆ. ಇದೇನೂ ಒಮ್ಮಿಂದೊಮ್ಮೆಲೆ ಕಾನೂನನ್ನು ತಂದಾಗಲೇ ಇದನ್ನು ಜಾರಿ ಮಾಡುವಾಗ ನ್ಯೂನತೆಗಳು ಇರುತ್ತವೆ. ಈಗ ವಿಧಾನ ಪರಿಷತ್ತಿನಲ್ಲಿ ಉಪ ಮುಖ್ಯಮಂತ್ರಿಗಳು ಇದ್ದಾರೆ. ಅವರು ಬಂದ ತಕ್ಷಣ ಇದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಈ ಸದನಕ್ಕೆ ಕೊಡುವುದಕ್ಕೆ ಇಷ್ಟಪಡುತ್ತೇನೆ.